# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 465 |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.07.2024 |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿಯಲ್ಲಿ ಹೆಣ್ಣು ಮಕ್ಕಳಿಗೆ ನೀಡಲಾಗುತ್ತಿದ್ದ ಭಾಗ್ಯಲಕ್ಷ್ಮಿ ಯೋಜನೆಯನ್ನು ಮುಂದುವರೆಸಲಾಗಿದೆಯೇ ಹಾಗಿದ್ದಲ್ಲಿ, ಯಾರ ಮೂಲಕ ಯಾವ ರೀತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ: (ಮಾಹಿತಿ ನೀಡುವುದು) | ಭಾಗ್ಯಲಕ್ಷ್ಮಿ ಯೋಜನೆಯನ್ನು ಮುಂದುವರೆಸಲಾಗುತ್ತಿದೆ.<br><br>2006-07 ರಿಂದ 2019-20ನೇ ಸಾಲಿನವರೆಗೆ ಭಾರತೀಯ ಜೀವ ವಿಮಾ ನಿಗಮವು ಪಾಲುದಾರ ಹಣಕಾಸು ಸಂಸ್ಥೆಯಾಗಿದ್ದು, 2020-21 ನೇ ಸಾಲಿನಿಂದ ಭಾಗ್ಯಲಕ್ಷ್ಮಿ ಯೋಜನೆಯನ್ನು ಅಂಚೆ ಇಲಾಖೆಯ ಸುಕನ್ಯಾ ಸಮೃದ್ಧಿ ಯೋಜನೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಭಾಗ್ಯಲಕ್ಷ್ಮಿ-ಸುಕನ್ಯಾ ಸಮೃದ್ಧಿ ಖಾತೆ ಯೋಜನೆಯಡಿ ಬಿಪಿಎಲ್ ಕುಟುಂಬದ 2 ಹೆಣ್ಣು ಮಕ್ಕಳಿಗೆ ಪ್ರತಿ ಮಗುವಿನ ಹೆಸರಿನಲ್ಲಿ ರೂ.3000/-ದಂತೆ 15 ವರ್ಷಗಳವರೆಗೆ ಒಟ್ಟು ರೂ.45,000/-ಗಳನ್ನು ಠೇವಣಿ ಹೂಡಲಾಗುತ್ತದೆ. 21 ವರ್ಷಗಳ ನಂತರ ಅಂದಾಜು ಪರಿಪಕ್ವ ಮೊತ್ತ ರೂ.1.27 ಲಕ್ಷ ನೀಡಲಾಗುತ್ತದೆ. |
| ಆ. | ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಪ್ರಸ್ತುತ ಸಾಲಿನಲ್ಲಿ ಇಲ್ಲಿಯವರೆಗೂ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು: ಅವುಗಳಲ್ಲಿ ಎಷ್ಟು ಅರ್ಜಿಗಳು ಅರ್ಹವಾಗಿವೆ; ಅವುಗಳಿಗೆ ಬಾಂಡ್‌ಗಳನ್ನು ನೀಡಲಾಗಿದೆಯೇ: (ಜಿಲ್ಲಾವಾರು ಮಾಹಿತಿ ನೀಡುವುದು) | • ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಪ್ರಸ್ತುತ ಸಾಲಿನಲ್ಲಿ ಇಲ್ಲಿಯವರೆಗೆ ಬಂದಿರುವ ಅರ್ಜಿಗಳ ಸಂಖ್ಯೆ:35,399 (ಸಂಪೂರ್ಣ ದಾಖಲಾತಿಗಳು ಇರುವ ಅರ್ಹ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು).<br>• ಅರ್ಹ ಅರ್ಜಿಗಳ ಸಂಖ್ಯೆ: 35,399<br>• ಅರ್ಹ ಅರ್ಜಿಗಳಿಗೆ 2024-25 ನೇ ಸಾಲಿನ 1ನೇ ಕಂತಿನ ಅನುದಾನದಲ್ಲಿ ಅಂಚೆ ಇಲಾಖೆ ಮೂಲಕ ಪಾಸ್ ಪುಸ್ತಕಗಳನ್ನು ವಿತರಿಸಲಾಗವುದು. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ)<br><br>(2006-07 ರಿಂದ 2019-20ರವರೆಗೆ LIC ಮೂಲಕ ಭಾಗ್ಯಲಕ್ಷ್ಮಿ ಬಾಂಡ್ ಗಳನ್ನು ವಿತರಿಸಲಾಗುತ್ತಿತ್ತು. 2020-21ನೇ ಸಾಲಿನಿಂದ ಅಂಚೆ ಇಲಾಖೆ ಮೂಲಕ ಪಾಸ್ ಪುಸ್ತಕಗಳನ್ನು ವಿತರಿಸಲಾಗುತ್ತಿದೆ). |

<table>
<tr>
<td>ಇ.</td>
<td>ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಬಾಂಡ್‌ಗಳನ್ನು ವಿತರಿಸಿರುವ ಮತ್ತು ವಿತರಿಸದೇ ಇರುವವರ ಸಂಖ್ಯೆ ಎಷ್ಟು; (ಮಾಹಿತಿ ಒದಗಿಸುವುದು)</td>
<td>ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷದಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಡಿ ಸಲ್ಲಿಕೆ ಮತ್ತು ವಿತರಿಸಿರುವ ಅರ್ಜಿಗಳ ವಿವರ ಈ ಕೆಳಕಂಡಂತಿವೆ.
<table>
<tr><th></th><th colspan="3">ಬಳ್ಳಾರಿ</th><th colspan="3">ವಿಜಯನಗರ</th></tr>
<tr><th></th><th>2021-22</th><th>2022-23</th><th>2023-24</th><th>2021-22</th><th>2022-23</th><th>2023-24</th></tr>
<tr><td>ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ</td><td>3610</td><td>5200</td><td>4605</td><td>3758</td><td>4603</td><td>4388</td></tr>
<tr><td>ವಿತರಿಸಿರುವ ಪಾಸ್ ಪುಸ್ತಕಗಳ ಸಂಖ್ಯೆ</td><td>3610</td><td>5200</td><td>3533</td><td>3758</td><td>4603</td><td>3911</td></tr>
</table>
ಕಳೆದ 3 ವರ್ಷಗಳ ವಿವರ<br><br>
*ಬಳ್ಳಾರಿ ಜಿಲ್ಲೆಯ 1072 ಮತ್ತು ವಿಜಯನಗರ ಜಿಲ್ಲೆಯ 477 ನೋಂದಾಯಿತ ಫಲಾನುಭವಿಗಳಿಗೆ 2024-25ನೇ ಸಾಲಿನ 1ನೇ ಕಂತಿನ ಅನುದಾನದಲ್ಲಿ ಅಂಚೆ ಇಲಾಖೆಯು ಪಾಸ್ ಪುಸ್ತಕಗಳನ್ನು ವಿತರಿಸಲಾಗುವುದು.</td>
</tr>
<tr>
<td>ಈ.</td>
<td>ಈ ಭಾಗ್ಯಲಕ್ಷ್ಮೀ ಯೋಜನೆಯಲ್ಲಿ ಒಂದು ಅರ್ಹ ಹೆಣ್ಣು ಮಗುವಿಗೆ ಸರ್ಕಾರ ನೀಡುತ್ತಿರುವ ಹಣ ಎಷ್ಟು ಹಾಗೂ ಆ ಮಗು ವಯಸ್ಸಿಗೆ ಬಂದಾಗ ಸಿಗುವ ಹಣ ಎಷ್ಟು; (ಮಾಹಿತಿ ನೀಡುವುದು)</td>
<td>ಭಾಗ್ಯಲಕ್ಷ್ಮಿ-ಸುಕನ್ಯ ಸಮೃದ್ಧಿ ಯೋಜನೆಯಡಿ ಬಿಪಿಎಲ್ ಕುಟುಂಬದ 2 ಹೆಣ್ಣು ಮಕ್ಕಳಿಗೆ ಪ್ರತಿ ಮಗುವಿನ ಹೆಸರಿನಲ್ಲಿ ರೂ.3000/-ದಂತೆ 15 ವರ್ಷಗಳವರೆಗೆ ಒಟ್ಟು ರೂ.45,000/-ಗಳನ್ನು ಠೇವಣಿ ಹೂಡಲಾಗುತ್ತದೆ. 21 ವರ್ಷಗಳ ನಂತರ ಅಂದಾಜು ಪರಿಪಕ್ವ ಮೊತ್ತ ರೂ.1.27 ಲಕ್ಷ (ಪ್ರಸ್ತುತ ಬಡ್ಡಿ ದರಗಳನ್ವಯ) ನೀಡಲಾಗುತ್ತದೆ.</td>
</tr>
<tr>
<td>ಉ.</td>
<td>ಈ ಭಾಗ್ಯಲಕ್ಷ್ಮಿ ಯೋಜನೆಗೆ ಸರ್ಕಾರ ಬಜೆಟ್‌ನಲ್ಲಿ ಮೀಸಲಿಟ್ಟಿರುವ ಒಟ್ಟು ಅನುದಾನ ಎಷ್ಟು? (ಮಾಹಿತಿ ನೀಡುವುದು)</td>
<td>2024-25ನೇ ಸಾಲಿನಲ್ಲಿ ಭಾಗ್ಯಲಕ್ಷ್ಮಿ-ಸುಕನ್ಯ ಸಮೃದ್ಧಿ ಯೋಜನೆಗೆ ಒಟ್ಟು ರೂ.224.00 ಕೋಟಿಗಳನ್ನು ಮೀಸಲಿರಿಸಲಾಗಿದೆ.</td>
</tr>
</table>

**ಸಂಖ್ಯೆ: ಮಮಇ 143 ಮಮಅ 2024**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು

| ಅನುಬಂಧ<br>ಭಾಗ್ಯಲಕ್ಷ್ಮಿ-ಸುಕನ್ಯಾ ಸಮೃದ್ಧಿ ಯೋಜನೆಯಡಿ 2024-25 ನೇ ಸಾಲಿಗೆ ಸಲ್ಲಿಕೆಯಾದ ಮತ್ತು ಅರ್ಹ ಅರ್ಜಿಗಳ ಜಿಲ್ಲಾವಾರು ವಿವರ | | | |
|---|---|---|---|
| **ಕ್ರ.ಸಂ** | **ಜಿಲ್ಲೆಗಳ ಹೆಸರು** | ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ | ಅರ್ಹ ಅರ್ಜಿಗಳ ಸಂಖ್ಯೆ |
| 1 | ಬಾಗಲಕೋಟೆ | 843 | 843 |
| 2 | ಬೆಂ.ಗ್ರಾ | 495 | 495 |
| 3 | ಬೆಂ.ನಗರ | 2131 | 2131 |
| 4 | ಬೆಳಗಾಂ | 2711 | 2711 |
| 5 | ಬಳ್ಳಾರಿ | 1118 | 1118 |
| 6 | ಬೀದರ್ | 1595 | 1595 |
| 7 | ಬಿಜಾಪುರ | 1460 | 1460 |
| 8 | ಚಾಮರಾಜನಗರ | 725 | 725 |
| 9 | ಚಿಕ್ಕಬಳ್ಳಾಪುರ | 862 | 862 |
| 10 | ಚಿಕ್ಕಮಗಳೂರು | 638 | 638 |
| 11 | ಚಿತ್ರದುರ್ಗ | 1009 | 1009 |
| 12 | ದಕ್ಷಿಣ ಕನ್ನಡ | 480 | 480 |
| 13 | ದಾವಣಗೆರೆ | 1236 | 1236 |
| 14 | ಧಾರವಾಡ | 983 | 983 |
| 15 | ಗದಗ | 689 | 689 |
| 16 | ಕಲಬುರಗಿ | 1418 | 1418 |
| 17 | ಹಾಸನ | 1443 | 1443 |
| 18 | ಹಾವೇರಿ | 1570 | 1570 |
| 19 | ಕೊಡಗು | 232 | 232 |
| 20 | ಕೋಲಾರ | 1033 | 1033 |
| 21 | ಕೊಪ್ಪಳ | 895 | 895 |
| 22 | ಮಂಡ್ಯ | 1471 | 1471 |
| 23 | ಮೈಸೂರು | 1778 | 1778 |
| 24 | ರಾಯಚೂರು | 1247 | 1247 |
| 25 | ರಾಮನಗರ | 869 | 869 |
| 26 | ಶಿವಮೊಗ್ಗ | 941 | 941 |
| 27 | ತುಮಕೂರು | 2531 | 2531 |
| 28 | ಉಡುಪಿ | 609 | 609 |
| 29 | ಉತ್ತರ ಕನ್ನಡ | 819 | 819 |
| 30 | ವಿಜಯನಗರ | 1163 | 1163 |
| 31 | ಯಾದಗಿರಿ | 405 | 405 |
| ಒಟ್ಟು | | ***35399*** | ***35399*** |

ಷರಾ:ಸಂಪೂರ್ಣ ದಾಖಲಾತಿಗಳು ಇರುವ ಅರ್ಹ ಅರ್ಜಿಗಳನ್ನು ಮಾತ್ರ ಸ್ವೀಕರಿಸಿ ನೋಂದಣಿ ಮಾಡುವುದರಿಂದ ಸಲ್ಲಿಕೆ ಮತ್ತು ಅರ್ಹ ಅರ್ಜಿಗಳು ಒಂದೇ ಆಗಿರುತ್ತದೆ.